ಎನ್. ಜಗನ್ನಾಥ ಪ್ರಕಾಶ್

# ಸಾಧು ಸಂತರ ನಾಟಕಕಾರ ಅಲ್ಲಾಳ್ ಮಾಸ್ಟರ್

ಬಹುತ್ವದ ಬೇರುಗಳಿರುವ ಭಾರತ ಸಮಾಜಕ್ಕನುಗುಣವಾಗಿ ಸಂತರು, ಸೂಫಿಗಳು, ತತ್ವಪದಕಾರರು, ಅನುಭಾವಿಗಳ ಬದುಕು ಆಧರಿಸಿದ ನಾಟಕಗಳನ್ನು ಬರೆದು, ನಿರ್ದೇಶಿಸಿ ಜನ ಮನ್ನಣೆಗಳಿಸಿದವರು ಲಾಲ್ ಮಹಮದ್ ಅಲ್ಲಾಳ್.

ಪುರಾಣ ಪುಣ್ಯ ಕತೆಗಳನ್ನು ಅನಾವರಣಗೊಳಿಸುತ್ತ ಜೀವನದ ಘಟನೆಗಳನ್ನು ಅದರೊಂದಿಗೆ ನೇಯುತ್ತ ನಾನಾ ಪ್ರಯೋಗಗಳಿಗೆ ಒಡ್ಡಿಕೊಂಡು ಸಾಗುತ್ತ ಬಂದ ರಂಗಭೂಮಿಗೆ ಹೊಸ ದಿಕ್ಕು ತೋರಿ ಭದ್ರಬುನಾದಿ ಹಾಕಿಕೊಟ್ಟವರು ನಾಟಕ ರಚನಾಕಾರರು. ಕನ್ನಡ ರಂಗಭೂಮಿಯಲ್ಲಿ ನಾಟಕ ರಚನೆ ಜೊತೆಗೆ ನಿರ್ದೇಶಕನಾಗಿ ಮಹತ್ವದ ಪಾತ್ರ ವಹಿಸಿದವರಲ್ಲಿ ಅಲ್ಲಾಳ್ ಮಾಸ್ಟರ್ ಅವರೂ ಒಬ್ಬರು.

ತಮ್ಮ ಓರಿಗೆಯ ಬಹಳಷ್ಟು ಬರಹಗಾರರಂತೆ ಪುರಾಣ ಕತೆಗಳನ್ನು ಆಧರಿಸಿದ ವಸ್ತುಗಳ ನಾಟಕರಚನೆಗೆ ಕೈಹಾಕಿದ ಅಲ್ಲಾಳರು ನಂತರ ಹೊರಳಿಕೊಂಡಿದ್ದು ಸಾಮಾಜಿಕ ನಾಟಕಗಳ ಕಡೆಗೆ. ಹತ್ತಾರು ಸಾಮಾಜಿಕ ನಾಟಕಗಳನ್ನು ಯಶಸ್ಸಿನ ಕಡೆಗೆ ನಡೆಸಿದ ಬಳಿಕ ಅವರ ದೃಷ್ಟಿ ಹರಿದಿದ್ದು ಸ್ಥಳೀಯ ಸಾಧು ಸಂತರತ್ತ.

ವೃತ್ತಿರಂಗಭೂಮಿ ನಗರ–ಪಟ್ಟಣಗಳಲ್ಲಿ ಹೆಚ್ಚು ಪ್ರಚಲಿತವಾಗಿದ್ದು ಗ್ರಾಮೀಣ ನಾಟಕ ಪ್ರಯೋಗಗಳಿಗೆ ಒತ್ತು ಸಿಕ್ಕತೊಡಗಿದಾಗ ಸಂತರು, ಪವಾಡ ಪುರುಷರನ್ನು ರಂಗದ ಮೇಲೆ ತರುವ ಪ್ರಯತ್ನಕ್ಕೆ ಮುಂದಾದ ಅಲ್ಲಾಳ್ ಮಾಸ್ಟರ್ ಅವುಗಳ ನಿರ್ದೇಶನವನ್ನು ಕೈಗೆತ್ತಿಕೊಂಡರು.

ಹತ್ತಾರು ಕಂಪೆನಿಗಳಲ್ಲಿ ನಾಟಕಕಾರರಾಗಿ ನಿರ್ದೇಶಕರಾಗಿ ಕೆಲಸ ಮಾಡಿದ ಅಲ್ಲಾಳರು ನಂತರ ಕೆಲವೇ ಜಿಲ್ಲೆಗಳ ಕೆಲವೇ ಹಳ್ಳಿಗಳ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದರು. ಆ ಹಳ್ಳಿಗಳಲ್ಲಿ ಇದ್ದು ಹೋಗಿದ್ದ ಪವಾಡ ಪುರುಷರು ಮಾಡಿದ ಕೆಲಸಗಳನ್ನು